**ಓ.ಎಸ್. ನಂ. 44/2020** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 27.10.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಬಸಮ್ಮ ರವರಿಗೆ ದಾವಾಸ್ವತ್ತು ಅವರ ತಂದೆ ಕಡೆಯಿಂದ ಬಂದಿರುತ್ತದೆ. ಅದರ ಸಂಬಂಧ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಬಸಮ್ಮ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಬಸಮ್ಮ ರವರಿಂದ ಸಣ್ಣಪ್ಪ ರವರಿಗೆ ಪೌತಿ ಮೇರೆಗೆ ಖಾತೆ ಆಗಿರುತ್ತದೆ. ಎಂ.ಆರ್ 4/49-50 ರಂತೆ ಬಸಮ್ಮರವರ 4 ನೇ ಮಗನಾದ ಸಣ್ಣಪ್ಪ ರವರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಗೊತ್ತಿಲ್ಲ. ಸಣ್ಣಪ್ಪ ರವರು ಪುಟ್ಟತಾಯಮ್ಮ ರವರನ್ನು ಮೊದಲನೇ ಹೆಂಡತಿಯಾಗಿ ಮದುವೆಯಾಗಿರುತ್ತಾರೆ ಎಂದರೆ ಸರಿ. ಸದರಿ ಪುಟ್ಟತಾಯಮ್ಮ ರವರಿಗೆ ನಾನು, ಇಂದ್ರಕುಮಾರ್, ನಾಗೇಂದ ಮತ್ತು ಲಲಿತ ಮಕ್ಕಳಾಗಿರುತ್ತೇವೆ ಎಂದರೆ ಸರಿ.

ಸಣ್ಣಪ್ಪ ರವರು ಗುರುಮಲ್ಲಮ್ಮ ರವರನ್ನು ಎರಡನೇ ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗುರುಮಲ್ಲಮ್ಮ ರವರ ಮುಖಾಂತರ ಸಣ್ಣಪ್ಪ ರವರಿಗೆ ಸರೋಜಮ್ಮ, ಪುಟ್ಟಮ್ಮ ಮತ್ತು ರಾಜಪ್ಪ ಮಕ್ಕಳಿರುತ್ತಾರೆ ಎಂದರೆ ಸರಿಯಲ್ಲ. ಗುರಮಲ್ಲಮ್ಮ ರವರ ಗಂಡನ ಹೆಸರು ಪುಟ್ಟತ್ತೈಪ್ಪ. ಗುರಮಲ್ಲಮ್ಮ ರವರ ಗಂಡನ ಹೆಸರು ಪುಟ್ಟತ್ತೈಪ್ಪ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪುಟ್ಟತ್ತೈಪ್ಪ ರವರು ಗುರುಮಲ್ಲಮ್ಮ ರವರ ಗಂಡನಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು ಸಣ್ಣಪ್ಪ ರವರಿಂದ ನನ್ನ ತಾಯಿ ನಾಗಮ್ಮ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. ನಾಗಮ್ಮ ರವರ ಹೆಸರಿಗೆ ಖಾತೆ ವರ್ಗಾವಣೆಯಾದ ಬಗ್ಗೆ ದಾಖಲೆಯನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುತ್ತೇನೆ. ಸುಮಾರು 35 ವರ್ಷದ ಹಿಂದೆ ನನ್ನ ತಾಯಿ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. ನಾನು ಮತ್ತು ನಾಗಮ್ಮ ಹಂಚಿಪುರ ಗ್ರಾಮದಲ್ಲಿ ವಾಸ ಮಾಡುತ್ತೇವೆ. ಪ್ರತಿವಾದಿ ಸಹ ಅದೇ ಗ್ರಾಮದಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ನಾಗಮ್ಮ ರವರ ತಂದೆ ಸಿದ್ದಾಪುರ ಗ್ರಾಮದವರು. ಗುರುಮಲ್ಲಮ್ಮ ರವರ ತಾಯಿ ಯಾವ ಗ್ರಾಮದವರು ಎಂದು ನನಗೆ ಗೊತ್ತಿರುವುದಿಲ್ಲ.

ದಾವಾಸ್ವತ್ತನ್ನು ಮೊದಲಿನಿಂದಲೂ ಪ್ರತಿವಾದಿಯ ತಂದೆ ಚಾಮಪ್ಪ ರವರು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಹೆಸರಿಗೆ ಖಾತೆ ಮಾತ್ರ ವರ್ಗಾವಣೆಯಾಗಿರುತ್ತದೆ, ಆದರೆ ನಾವು ಎಂದಿಗೂ ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಪಹಣಿಯ ಕಲಂ ನಂಬರ್ 12 ರ ಪ್ರತಿವಾದಿಗಳ ತಂದೆ ದಾವಾಸ್ವತ್ತನ್ನು ವ್ಯವಸಾಯ ಮಾಡುತ್ತಿದ್ದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ತಂದೆ ಮೃತಪಟ್ಟ ನಂತರ ಪ್ರತಿವಾದಿಗಳೇ ದಾವಾಸ್ವತ್ತನ್ನು ಈ ದಿನದವರೆಗೂ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 2000 ರ ಪೂರ್ವದಲ್ಲಿ ನಾವು ದಾವಾಸ್ವತ್ತಿಗೆ ಕಂದಾಯ ಪಾವತಿ ಮಾಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2019-20 ನ್ನು ಹೊರತುಪಡಿಸಿ ಹಳೇ ಕಂದಾಯ ಪಾವತಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

1975 ರಲ್ಲಿ ಚಿಕ್ಕಾಲಮ್ಮರವರಿಗೆ ಸಣ್ಣಪ್ಪ ರವರ ಎರಡನೇ ಹೆಂಡತಿಯಾದ ಗುರುಮಲ್ಲಮ್ಮ ರವರು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಅದಲು ಬದಲು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಕಾಟ್ವಾಳು ಗ್ರಾಮದಲ್ಲಿರುವ ಸರ್ವೆ ನಂ. 9/2 ರ 2-33 ಎಕರೆ ಜಮೀನಿಗೆ ಮತ್ತು ನಮಗೆ ಯಾವುದೇ ಸಂಬಂಧವಿರುವುದಿಲ್ಲ, ಸದರಿ ಜಮೀನನ್ನು ಚಿಕ್ಕಾಲಮ್ಮ ರವರು ಅದಲು ಬದಲು ಪತ್ರದ ಮೂಲಕ ಗುರುಮಲ್ಲಮ್ಮ ರವರಿಗೆ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ಕಾಟ್ವಾಳು ಗ್ರಾಮದಲ್ಲಿರುವ ಸರ್ವೆ ನಂ. 28 ರ 3-02 ಎಕರೆ ಜಮೀನಿಗೂ ಮತ್ತು ನಮಗೂ ಯಾವುದೇ ಸಂಬಂಧವಿರುವುದಿಲ್ಲ. ಕಾಟ್ವಾಳು ಗ್ರಾಮದಲ್ಲಿರುವ ಮೇಲೆ ಹೇಳಿದ ಎರಡೂ ಸ್ವತ್ತುಗಳು ಗುರುಮಲ್ಲಮ್ಮ ಮತ್ತು ಚಿಕ್ಕಾಲಮ್ಮ ರವರ ಸ್ವತ್ತಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಅದಲು ಬದಲು ದಾಖಲೆಯಂತೆ ಪ್ರತಿವಾದಿಗಳು ದಾವಾಸ್ವತ್ತಿನ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಕಾಟ್ವಾಳು ಗ್ರಾಮದಲ್ಲಿರುವ ಸರ್ವೆ ನಂ.28 ರ ಜಮೀನು ಖಾತೆ ಗುರುಮಲ್ಲಮ್ಮ ರವರ ತಾಯಿಯಾದ ದೇವಿರಮ್ಮ ಕೋಂ ಕೆಂಪಣ್ಣ ರವರ ಹೆಸರಿನಲ್ಲಿ ನಡೆದುಕೊಂಡು ಬರುತ್ತಿದೆ ಎಂದರೆ ಗೊತ್ತಿಲ್ಲ.

ಗುರುಮಲ್ಲಮ್ಮ ರವರು ಸಣ್ಣಪ್ಪ ರವರ 2 ನೇ ಹೆಂಡತಿಯಾಗಿದ್ದು, ಆಕೆಗೂ ಮತ್ತು ಅವರ ಮಕ್ಕಳಿಗೂ ದಾವಆಸ್ತಿಯಲ್ಲಿ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಸೇರಿಕೊಂಡು ಸೃಷ್ಟಿ ಮಾಡಿಕೊಂಡಿರುವ ವಿಭಾಗ ಪತ್ರ ಮತ್ತು ಅದರಂತೆ ಅಕ್ರಮವಾಗಿ ಮಾಡಿಸಿಕೊಂಡಿರುವ ಖಾತೆ ಗುರುಮಲ್ಲಮ್ಮ ಮತ್ತು ಅವರ ಮಕ್ಕಳ ಮೇಲೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ದಾವಾಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಗುರುಮಲ್ಲಮ್ಮ ರವರಿಗೆ ದಾವಾಸ್ವತ್ತಿನಲ್ಲಿ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನ ಸ್ವಾಧೀನವನ್ನು ಹೊಂದಿರುವುದಿಲ್ಲ, ಆ ಕಾರಣ ನಾನು ಹೇಳಿದಂತೆ ಪ್ರತಿವಾದಿಗಳು ಎಂದಿಗೂ ನನ್ನ ಸ್ವಾಧೀನಕ್ಕೆ ತೊಂದರೆ ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ದಾವೆ ಹೂಡುವ ಮೊದಲು ಪ್ರತಿವಾದಿಗಳು ನನ್ನ ಸ್ವಾಧೀನಕ್ಕೆ ತೊಂದರೆ ಕೊಟ್ಟ ಬಗ್ಗೆ ದೂರನ್ನು ಪೋಲಿಸರಿಗೆ ನೀಡಿರುತ್ತೇನೆ. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ಹೇಳಿದಂತೆ ಯಾವುದೇ ದೂರನ್ನು ನೀಡಿರುವುದಿಲ್ಲ, ಆ ಕಾರಣ ನಾನು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಿಂದ ಮಧ್ಯಂತರ ಆದೇಶದವನ್ನು ಪಡೆದುಕೊಂಡು ಪ್ರತಿವಾದಿಗಳಿಗೆ ವಿನಾಕಾರಣ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆದೇಶವನ್ನು ಪಡೆದುಕೊಂಡು ಪ್ರತಿವಾದಿಗಳಿಗೆ ನನಗೆ ತೊಂದರೆ ಕೊಡುತ್ತಿದ್ದಾರೆ ಎಂದು ಈಗ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮಧ್ಯಂತರ ಆದೇಶದ ಮೇಲೆ ಪ್ರತಿವಾದಿಗಳು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅದು ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.